# ಮಕ್ಕಳ ನಗುವಿನ ಶಕ್ತಿ



**ಎಳೆಯರ ಜೀವನ್ಮುಖಿ ಶಕ್ತಿ ದೊಡ್ಡವರ ತರ್ಕವನ್ನು ಮೀರಿದ್ದು. ಅವರ ಪ್ರಶ್ನೆಗಳು, ಮಾತು, ಹಟಮಾರಿತನ, ಅಳು, ಎಲ್ಲದರ ಕೇಂದ್ರದಲ್ಲಿ ಜೀವನ್ಮುಖಿ ಶಕ್ತಿಯೊಂದಿದೆ.**

■ ಸ್ವಯಂಪ್ರಭಾ

ಮದುವೆಯೂಟದ ಪಂಕ್ತಿಯೊಂದರಲ್ಲಿ ಪುಟಾಣಿ ಶ್ರೀಜ ಕುಳಿತಿದ್ದಳು. ಅಮ್ಮ ಶಾಲಿನಿಯ ಪಕ್ಕವೇ ಪ್ರತ್ಯೇಕ ಬಾಳೆಎಲೆ ಹಾಕಿಸಿಕೊಂಡು ಅದರೆದುರು ಕುಳಿತಿದ್ದಳು. ಮೂರು ವರ್ಷದ ಶ್ರೀಜ ಮಾತಿನ ಮಲ್ಲಿ. ಬಡಿಸಲು ಬರುವ ಪ್ರತಿಯೊಬ್ಬರಿಗೂ ಪ್ರಶ್ನೆಗಳನ್ನು ಕೇಳುತ್ತಿದ್ದಳು. ಭಕ್ಷ್ಯಗಳಿಗೆ, ಭೋಜ್ಯಗಳಿಗೆ ತನ್ನದೇ ಭಾಷೆಯಲ್ಲಿ ಹೆಸರಿರಿಸಿ, 'ಅದು ಬೇಡ, ಇದು ಬೇಕು', ಅಯ್ಯೋ ಸಾರು ಎಲೆಯಿಂದ ಹೊರಗೋಡಿತು, ಸಾರಿನ ಮೇಲೆ ಪಾಯಸ ಹಾಕು... ಎಂದೆಲ್ಲ ತಾರಾಮಾರಾ ರಂಪ ಮಾಡುತ್ತಿದ್ದಳು. ಶಾಲಿನಿಯೋ, ಮಗಳ ರಂಪಾಟದ ನಡುವೆಯೇ, ಅವಳು ಒಂದೆರಡು ತುತ್ತು ಉಣ್ಣಲಿ ಎಂಬಂತೆ ಒತ್ತಾಯಿಸುತ್ತಾ, ತಾನೂ ಊಟ ಮಾಡುತ್ತಿದ್ದಳು.

ಶ್ರೀಜಳ ಪ್ರಶ್ನೆಗಳಿಗೆ ಸುತ್ತ ಕುಳಿತವರು ನಗುತ್ತ ಉತ್ತರಿಸುತ್ತಿದ್ದರು. ಶ್ರೀಜ. ಬಾಯಿಯ ಸುತ್ತಾ ಅನ್ನದ ಅಗಳು, ಎಂಜಲು ಮೆತ್ತಿಕೊಂಡು, ಎರಡೂ ಕೈಯಲ್ಲಿ ಎಂಜಲು ಇರಿಸಿಕೊಂಡು, ತೋರು ಬೆರಳೆತ್ತಿ ಅಮ್ಮನನ್ನು ಪ್ರಶ್ನೆ ಮಾಡುತ್ತಾ, ಎದುರು ಕುಳಿತವರ ದುರುಗುಟ್ಟಿ ನೋಡುತ್ತಾ, 'ಖಾರವಾಯಿತೂ...' ಎಂದು ವರಾತ ತೆಗೆಯುತ್ತಾ... ಅಬ್ಬಬ್ಬಾ... ಪುಟ್ಟಿಯ ಲೀಲೆಗಳನ್ನು ನೋಡುವುದೇ ಚಂದ. ಅಲ್ಲಿ ಕುಳಿತ ಅಷ್ಟೂ ಜನರ ಬದುಕಿನ ಕ್ಷಣಗಳನ್ನು ಅವಳು ತನಗೆ ಅರಿವಿಲ್ಲದಂತೆಯೇ ಹಗುರವಾಗಿಸಿದ್ದಳು.

ಅಲ್ಲಿ ಕುಳಿತವರ ಪೈಕಿ ಒಬ್ಬರಿಗೊಬ್ಬರು ಪರಿಚಯಸ್ಥರೇನೂ ಅಲ್ಲ. ಒಂದೇ ಮದುವೆಗೆ ಬಂದಿದ್ದರು ಎಂಬೊಂದು ಸಾಮಾನ್ಯ ಅಂಶ. ಆದರೆ ಶ್ರೀಜಳ ಬಾಲಲೀಲೆಯ ದೆಸೆಯಿಂದಾಗಿ ಎಲ್ಲರೂ ಒಟ್ಟಾಗಿ ನಗುತ್ತಿದ್ದರು. ತಮ್ಮದೇ ಮನೆಯ ಮಗುವೇನೋ ಎಂಬಂತೆ ಆಕೆಯತ್ತ ಪ್ರಶ್ನೆಗಳ ಹೂಮಳೆ ಸುರಿಸುತ್ತಿದ್ದರು.

ಸುದೀಪ್ತಿ ತನ್ನ ಸ್ನೇಹಿತೆಯ ಮನೆಗೆ ಮಗು ನೋಡಿಕೊಳ್ಳಲು ಹೋಗುತ್ತಾಳೆ. ಸುದೀಪ್ತಿ 22ರ ಉದ್ಯೋಗಸ್ಥೆ. ಅವಳ ಪಕ್ಕದ ಮನೆಯ ಸ್ನೇಹಿತೆ ರಮ್ಯಾಳಿಗೆ ಹೆರಿಗೆಯಾಗಿ ಇನ್ನೂ ಮೂರು ತಿಂಗಳಾಗಿಲ್ಲ. ಬಾಣಂತಿ ಸ್ನಾನ, ಊಟ ಮತ್ತಿತರ ಆರೈಕೆಯ ಸಂದರ್ಭದಲ್ಲಿ, ಮಗುವನ್ನು ಒಂಟಿಯಾಗಿ ಬಿಡಬಾರದು ಎಂಬ ಕಾರಣಕ್ಕೆ ಮಗುವಿನ ಜತೆ ಸುಮ್ಮನೇ ಕುಳಿತಿರುವುದಷ್ಟೇ ಅವಳ ಕೆಲಸ. ಎರಡೂವರೆ ತಿಂಗಳ ಪುಟ್ಟ ಮಗು ಕಣ್ಣು ಪಿಳಿ ಪಿಳಿ ಮಾಡುವುದು ಮತ್ತು ಕೈಕಾಲು ಅಲ್ಲಾಡಿಸುವುದನ್ನು ಬಿಟ್ಟರೆ ಅಳುವುದನ್ನಷ್ಟೇ ಕಲಿತಿದೆ. ಮನದೊಳಗೆ ಯಾವ ಲಹರಿ ಹರಿದಾಡುವುದೋ, ಆಗೀಗ ಬೊಚ್ಚು ಬಾಯಿಯ ನಗು.

ಸುದೀಪ್ತಿಗೆ ಮಗುವಿನ ಮುಖವನ್ನು ನೋಡುತ್ತ, ಬಹಳ ಅಚ್ಚರಿಯಾಗುತ್ತದೆ, ನಾಲ್ಕೈದು ಗಂಟೆಗಳ ಕಾಲ ಸುಮ್ಮನೇ ಕುಳಿತಿದ್ದರೂ ಒಂದಿಷ್ಟೂ ಬೋರ್ ಎನಿಸುವುದಿಲ್ಲ. ಮಾತುಕತೆಯಿಲ್ಲದೆ, ಹೀಗೆ ತನ್ನ ಗಮನವನ್ನು ಹಿಡಿದಿಡುವ ಈ ಪುಟ್ಟ ಕಂದನಲ್ಲಿ ಯಾವ ಆಕರ್ಷಣೆಯ ಶಕ್ತಿಯಿದೆ! ಮಗುವಿನ ದೇವಭಾಷೆಯನ್ನು ನೋಡುತ್ತ, ಕೇಳುತ್ತಾ, ಆ ಶಬ್ದಗಳಿಗೆ ತನ್ನದೇ ಆದ ವಿಶ್ಲೇಷಣೆಗಳನ್ನು ನೀಡುತ್ತಾ ಇರುತ್ತಾಳೆ. ಮಗು ಆ ಕೊಠಡಿಯ ತುಂಬಾ ಖುಷಿಯ ತರಂಗಗಳನ್ನು ಎಬ್ಬಿಸುತ್ತಿರುವುದನ್ನು ಅವಳು ಗಮನಿಸುತ್ತಿದ್ದಾಳೆ. ಅದಕ್ಕೇ ಇರಬೇಕು, ಹಿರಿಯರು ಹೇಳುವುದು, 'ಪುಟ್ಟ ಮಕ್ಕಳೆಂದರೆ ದೇವರು' ಅಂತ.

ಮಕ್ಕಳು ದೇವರೆನ್ನುವ ಹೇಳಿಕೆಯ ಸತ್ಯಾಸತ್ಯತೆ ಏನೇ ಇರಲಿ, ಮಕ್ಕಳಲ್ಲಿ ನಮಗೆ ಗೋಚರಿಸದ ಅಂಶವೊಂದು ಇದ್ದೇ ಇದೆ ಎನಿಸುವುದು ಸಹಜ. ಬದುಕಿನ ಜಂಜಾಟಗಳಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುತ್ತಲೇ ಇರುವ ದೊಡ್ಡವರು, ನೋವನ್ನು ಬೇಗನೆ ಮರೆತುಬಿಡುವ ಮಕ್ಕಳನ್ನು ಕಂಡು ಅಚ್ಚರಿಪಡದೇ ಇರುವುದು ಸಾಧ್ಯವೇ? ಅವರ ಆ ಶಕ್ತಿ ದೊಡ್ಡವರ ತರ್ಕವನ್ನು ಮೀರಿದ್ದು. ತಮ್ಮ ಸಕಾರಾತ್ಮಕತೆಯ ಮೂಲಕ ಅವರು ವಾತಾವರಣಕ್ಕೆ ಖುಷಿಯ ಬೆಳಕನ್ನು ಕೊಡುತ್ತಾರೆ. ಅವರ ಪ್ರಶ್ನೆಗಳು, ಮಾತುಗಳು, ಹಟಮಾರಿತನ, ಅಳು, ಎಲ್ಲವುಗಳ ಕೇಂದ್ರದಲ್ಲಿ ಜೀವನ್ಮುಖಿ ಶಕ್ತಿಯೊಂದು ಇರುವುದನ್ನು ಕಾಣುತ್ತೇವೆ.

ಈ ಶಕ್ತಿಯನ್ನು ಗಮನಿಸುತ್ತ, ಗೌರವಿಸುತ್ತ ದೊಡ್ಡವರು ಮಕ್ಕಳೊಡನೆ ಮಾತುಕತೆಯನ್ನು ನಡೆಸಬೇಕು. ತಮ್ಮ ಮನೆಯ ಮಕ್ಕಳಷ್ಟೇ ಅಲ್ಲ, ಯಾವುದೇ ಮಗುವನ್ನು ಮಾತನಾಡಿಸುವಾಗ, ಆ ಮಗುವಿನ ಅಂತರಂಗದಲ್ಲಿ ಇರುವ ಜೀವನ್ಮುಖಿ ಶಕ್ತಿಯೊಂದನ್ನು ಗೌರವಿಸಿ ಮಾತನಾಡಬೇಕು ಎನಿಸುತ್ತದೆ. ದೊಡ್ಡವರಲ್ಲಿ ಇಂತಹ ಧೋರಣೆಯೊಂದು ಇದ್ದರೆ ಅದರಿಂದ ಸಾಮಾಜಿಕವಾಗಿಯೂ ಲಾಭಗಳಿವೆ. ಮಕ್ಕಳೆಂದರೆ ಏನೂ ಕೈಲಾಗದ ದುರ್ಬಲರೆಂದು ಪರಿಗಣಿಸುವುದೆಂದರೆ, ಅದು ತಮ್ಮ ದೌರ್ಬಲ್ಯವನ್ನೇ ಒಪ್ಪಿಕೊಂಡಂತೆ.

ಮಕ್ಕಳೊಂದಿಗಿನ ಮಾತು, ದೊಡ್ಡವರ ಮನದಲ್ಲಿರುವ ಒತ್ತಡವನ್ನು ಕಡಿಮೆ ಮಾಡುತ್ತದೆ. ಮಕ್ಕಳ ಮಾತಿನಲ್ಲಿರುವ ಹೊಳಹುಗಳು ದೊಡ್ಡವರ ಮನಸ್ಸಿನಲ್ಲಿರುವ ಸಮಸ್ಯೆಗಳ 'ಒತ್ತಡವನ್ನು ಕಡಿಮೆ ಮಾಡಬಲ್ಲವು ಕೂಡ. ಆಲಿಸುವ ಕ್ರಮವೊಂದನ್ನು ಅರಿಯುವುದು ಪೋಷಣಾಕ್ರಮದ ಒಂದು ಭಾಗ.

ಪ್ರತಿಕ್ರಿಯಿಸಿ: feedback@sudha.co.in